ವಸುಮತಿ ಉಡುಪ

# ಪ್ರಾರಬ್ಧ



ಹುಣ್ಣಿಮೆಯ ಸಮೀಪದ ದಿನಗಳು. ರಾತ್ರಿಯೂಟ ಮುಗಿದು ಮಲಗುವ ಮುನ್ನ ದಂಪತಿ ಮನೆಯ ಮುಂಭಾಗದ ಮೆಟ್ಟಿಲ ಮೇಲೆ ಕುಳಿತು ಸಣ್ಣದೊಂದು ವಾರ್ತಾಲಾಪದಲ್ಲಿ ತೊಡಗಿಕೊಂಡಿದ್ದರು. ಇಬ್ಬರ ನಡುವೆ ವೀಳೆಯದ ತಟ್ಟೆ. ತಟ್ಟೆಯೊಳಗೆ ಬಣ್ಣ ಕಟ್ಟಿದ ಅಡಿಕೆಪುಡಿ. ಮನೆಯಲ್ಲೇ ತಯಾರಿಸಿದ ಸುಣ್ಣ ತುಂಬಿದ ಪುಟ್ಟ ಡಬ್ಬಿ. ಹಟ ಹೊತ್ತು ಗಂಡನಿಂದ ತಂಬಾಕಿನ ವ್ಯಸನ ಬಿಡಿಸಿದ್ದಳು ನಳಿನಿ. ಹೊಸ ಹೆಂಡತಿ ಕೊಟ್ಟಿದ್ದ ಕಾರಣವಾದರೂ ಎಂತದು? ಹೊಗೆಸೊಪ್ಪಿನ ವಾಸನೆ ಅಂದರೆ ಅವಳಿಗೆ ವಾಂತಿ ಬಂದುಬಿಡುತ್ತದೆಯಂತೆ. ಅದಕ್ಕೊಂದು ಬಾಲಂಗೋಚಿ ಕೂಡಾ ಇತ್ತು. ಹುಳುಕು ಹಿಡಿದ ಅವಳ ದವಡೆಹಲ್ಲು ಯಮಯಾತನೆ ಕೊಡುವಂತಾ ಸಂದರ್ಭಗಳಲ್ಲಿ ಅವಳ ಅಜ್ಜಿ ತಂಬಾಕನ್ನು ಅಂಗೈ ಕುಳಿಯಲ್ಲಿ ಮಿದ್ದು ಆ ಹಲ್ಲಿಗೆ ಸಮಾ ಒತ್ತಿಟ್ಟು ಕಚ್ಚಿಕೊಳ್ಳಲು ಹೇಳುತ್ತಿದ್ದಳಂತೆ. ಸ್ವಲ್ಪ ಹೊತ್ತಿನಲ್ಲಿ ಜುಮುಜುಮುಗುಟ್ಟುತ್ತಾ ತಂಬಾಕಿನ ನಶೆ ನೆತ್ತಿಗೇರಿ, ಮೈಯಿಡೀ ಬಿಸಿಬಿಸಿಯಾಗಿ, ಬಾಯಿ ತುಂಬಿಕೊಳ್ಳುವ ಎಂಜಲುನೀರು ತುಪ್ಪಲು ತಲೆದಸಿಯಲ್ಲೊಂದು ಹಳೆಯ ತಟ್ಟೆ. ಹೀಗೆ ಎಂಜಲು ನೀರು ಉಗಿಯುವಾಗಲೆಲ್ಲಾ ತಂಬಾಕಿನ ವಾಸನೆ ಬಾಯೊಳಗೆ ಕೆರಳಿದಂತಾಗಿ ಹೊಟ್ಟೆ ತೊಳೆಸಿ ವಾಂತಿ ಬರುವಂತಾಗುತ್ತಿತ್ತು ನಳಿನಿಗೆ. ಕೆಲವೊಮ್ಮೆ ವಾಂತಿ ಬಂದೇಬಿಡುತ್ತಿತ್ತು. ಎಲ್ಲಿದ್ದರೂ ಈ ಕಡೆ ಒಂದು ಕಣ್ಣಿಟ್ಟಿರುತ್ತಿದ್ದ ಅಜ್ಜಿ ಓಡಿ ಬರುತ್ತಿದ್ದಳು. 'ಪ್ರಾರಬ್ಧ, ಹಾಸಿಗೆ ಮೇಲೆಲ್ಲಾದ್ರೂ ವಾಂತಿ ಮಾಡಿಬಿಡ್ಬೇಡ್ವೇ. ವಾಂತಿ ಬರೋ ಹಾಗಾದ್ರೆ ಎದ್ದು ಬಚ್ಚಲಿಗೆ ಹೋಗೋದಲ್ವಾ?' ಎಂದು ಮಂತ್ರಾಕ್ಷತೆಯಾಗುತ್ತಿತ್ತು. ತಪ್ಪೊಪ್ಪಿಗೆಯ ಸಣ್ಣ ಮುಖ ಮಾಡಿಕೊಂಡು ವಾಂತಿ ಬಳಿಯಲು ಸಹಕರಿಸುತ್ತಿದ್ದಳು ಈ ಮೊಮ್ಮಗಳು.

"ಆಯ್ತು ಮಾರಾಯ್ತೀ. ಇಕಾ, ಈ ಗಳಿಗೆಯಿಂದ ತಂಬಾಕು ಬಿಟ್ಟು ಹೊಡೀತೀನಿ. ನಿನ್ನೆದ್ರು ತಿನ್ನದಿದ್ರೆ ಸೈಯಲ್ಲ?"